# ಹೊಸತು

## ಆರ್ಥೊ ಸ್ಲೀಪ್ ದಿಂಬು



ವೈದ್ಯಕೀಯ ಸಾಧನಗಳನ್ನು ಸರಬರಾಜು ಮಾಡುವ ಪ್ಯಾರಮೌಂಟ್ ಸರ್ಜಿಮೆಡ್ಸ್ ಲಿಮಿಟೆಡ್ ಕಂಪೆನಿ ಮಂಡಿನೋವಿನಿಂದ ಬಳಲುವವರಿಗಾಗಿ 'ಆರ್ಥೊ ಸ್ಲೀಪ್ ನೀ ವೆಡ್ಜ್' ಎಂಬ ದಿಂಬು ಒಂದನ್ನು ಮಾರುಕಟ್ಟೆಗೆ ಹೊಸದಾಗಿ ಬಿಡುಗಡೆ ಮಾಡಿದೆ. ವೈಜ್ಞಾನಿಕ ತಂತ್ರಜ್ಞಾನದಿಂದ ಸಿದ್ಧಪಡಿಸಲಾಗಿರುವ ಈ ದಿಂಬು ಕಾಲಿನಲ್ಲಿ ರಕ್ತಸಂಚಾರ ಸುಗಮವಾಗುವಂತೆ ಮಾಡಿ, ನೋವನ್ನು ನೀಗಿಸುತ್ತದೆ. ಆರಾಮದಾಯಕ ನಿದ್ದೆಗೆ ಸಹಕರಿಸುತ್ತದೆ ಎಂಬುದು ಕಂಪೆನಿ ವಿವರಣೆ. ಬೆಲೆ 1900 ರಿಂದ 5900 ರೂಪಾಯಿ. ಕಂಪೆನಿಯ ನೇರ ಮಾರಾಟ ಪ್ರತಿನಿಧಿಗಳಲ್ಲಿ ಲಭ್ಯ. ಮಾಹಿತಿಗೆ: 96504 77644.

## 'ವಿಲಿಯಂ ಪೆನ್'ನಿಂದ ಹೊಸ ಲೇಖನಿ



ವಿಲಿಯಂ ಪೆನ್ ಕಂಪೆನಿ ರಷ್ಯನ್ ಟೈಗರ್ ಚಿತ್ರಣವಿರುವ ವಿನೂತನ ವಿನ್ಯಾಸದ ಲೇಖನಿಯನ್ನು ಬಿಡುಗಡೆ ಮಾಡಿದೆ. ದಿ ರಾಯಲ್ ಬೆಂಗಾಲ್ ಟೈಗರ್ ಹೆಸರಿನ ಈ ಪೆನ್ ಎಬಿ ಲಿಮಿಟೆಡ್ ಎಡಿಷನ್ ಸಹಯೋಗ ದೊಂದಿಗೆ ಬಿಡುಗಡೆಯಾಗಿದ್ದು, ರಷ್ಯಾದ ಪಾರಂಪರಿಕ ಕಲಾ ಸಂಪ್ರದಾಯವನ್ನು ಪರಿಚಯಿಸುವ ಸಲುವಾಗಿ ಇದನ್ನು ಹೊರತಂದಿದೆ ಎಂಬುದು ಕಂಪೆನಿ ವಿವರಣೆ. ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗೆ: 9738007723

## ಲ್ಯಾಕ್ಮೆ 9 ಟು 5




ಸೌಂದರ್ಯವರ್ಧಕ ಕಂಪೆನಿ ಲ್ಯಾಕ್ಮೆ ಇದೀಗ ಹೊಸ ಅವತಾರದಲ್ಲಿ 'ಲ್ಯಾಕ್ಮೆ 9 ಟು 5' ನೈಲ್ ಎನಾಮಲ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಈ ಸುಧಾರಿತ ಉಗುರು ಬಣ್ಣ ದೀರ್ಘ ಕಾಲ ಬಾಳಿಕೆ ಬರುವುದಲ್ಲದೆ ಸದಾ ಕಾಲ ಹೊಳಪಿನಿಂದ ಕೂಡಿರುತ್ತದೆ. 15 ವೈವಿಧ್ಯಮಯ ಶೇಡ್‌ಗಳಲ್ಲಿ ಸಿಗುತ್ತದೆ. ಬೆಲೆ 225 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಲಭ್ಯ.




## ಬಾಷ್‌ನಿಂದ ಕಾರ್ ಕ್ಲೀನರ್

ಬಾಷ್ ಪವರ್ ಟೂಲ್ ಕಂಪೆನಿ ಇದೀಗ ಹೊಸದಾಗಿ ಕಾರು ಕ್ಲೀನ್ ಮಾಡುವ ಮೆಷಿನ್ ಒಂದನ್ನು ಮಾರುಕಟ್ಟೆಗೆ ತಂದಿದೆ. ಮಳೆಗಾಲದಲ್ಲಿ ಕೆಸರು ಎರಚಿರುವ ಕಾರುಗಳನ್ನು ಅತಿ ಬೇಗನೆ ಸ್ವಚ್ಛಗೊಳಿಸಲು ಇದು ಸಹಕರಿಸುತ್ತದೆ. ಬೆಲೆ 10,500 ರೂಪಾಯಿಗಳಿಂದ 18 ಸಾವಿರ ರೂಪಾಯಿ.
ವಿವರಕ್ಕೆ: 96202 20751

## ಹೊಸ ಪ್ಲಾಟಿನಂ ರಿಂಗ್



ವಾಮನ್ ಹರಿ ಪೇಠ್ ಜ್ಯುವೆಲ್ಲರಿ ಅತ್ಯಾಕರ್ಷಕ ವಿನ್ಯಾಸ ಪ್ಲಾಟಿನಂ ರಿಂಗ್ ಅನ್ನು ಹೊರತಂದಿದೆ. ನುರಿತ ಕರಕುಶಲಗಾರರಿಂದ ತಯಾರಿಸಿದ ಈ ರಿಂಗ್ 'ಕರ್ವ್ಡ್ ಪ್ಯಾಟರ್ನ್' ನಲ್ಲಿ ಇರುವುದರಿಂದ ಆಭರಣ ಪ್ರಿಯರಿಗೆ ಇಷ್ಟವಾಗಬಹುದು ಎಂಬುದು ಆಭರಣ ತಯಾರಿಕರ ವಿಶ್ವಾಸ. ವಿವರಕ್ಕೆ: www.wamanharipethesons.com

## ಸನ್‌ಕಿಂಗ್ ಸೋಲಾರ್ ಲ್ಯಾಂಪ್




ಸನ್‌ಕಿಂಗ್ ಸೋಲಾರ್ ಕಂಪೆನಿ ಹೊಸ ಬಗೆಯ ಸೋಲಾರ್ ಲ್ಯಾಂಪ್ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ರಾತ್ರಿ ಪ್ರಯಾಣದ ವೇಳೆ ಕೊಂಡೊಯ್ಯಲು ಅನುಕೂಲಕರವಾಗಿದೆ. ಇದರಲ್ಲಿ ಮೊಬೈಲ್ ಚಾರ್ಜ್ ಕೂಡ ಮಾಡಿಕೊಳ್ಳಬಹುದು. ಈ ಸೋಲಾರ್ ದೀಪವನ್ನು 45 ಗಂಟೆಗಳ ಕಾಲ ಉರಿಸಬಹುದು. ಇದರ ಬ್ಯಾಟರಿ ಐದು ವರ್ಷಕಾಲ ಬಾಳಿಕೆ ಬರುತ್ತದೆ ಎಂಬುದು ಕಂಪೆನಿ ವಿವರಣೆ. ಬೆಲೆ 1800 ರೂಪಾಯಿ.
ಮಾಹಿತಿಗೆ: 9967941471